**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ. ಎಮ್. ಎಫ್. ಸಿ. ನ್ಯಾಯಾಲಯ, ಜೇವರ್ಗಿ.**

**ಸಿಸಿ ನಂ.117/2018**

**ಚಾಸಾ-27/ಪಿಡಬ್ಲೂ-25**

| | |
|---|---|
| **ಹೆಸರು** | ಡಾಃ ಬಿ. ಎಸ್. ಸುಧಾಕರ |
| **ತಂದೆ ಹೆಸರು** | ಭೀಮರಾವ |
| **ವಯಸ್ಸು** | 45 ವರ್ಷಗಳು. |
| **ಉದ್ಯೋಗ** | ಆರಕ್ಷಕ ನಿರೀಕ್ಷಕರು, ಸಿಸಿಬಿ, ಬೆಂಗಳೂರು |
| **ವಾಸ ಸ್ಥಳ** | ಬೆಂಗಳೂರು |

**ಸಾಕ್ಷಿಯನ್ನ ದಿನಾಂಕ 16-11-2019 ರಂದು ಸಾಕ್ಷಿಯನ್ನ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭೀಯೋಜಕರಿಂದ.**

ನಾನು ಜೂನ್–2009 ರಿಂದ ಅಕ್ಟೋಬರ–2009 ರವರೆಗೆ ಜೇವರ್ಗಿ ಪೊಲೀಸ ಠಾಣೆಯಲ್ಲಿ ಆರಕ್ಷಕ ಉಪ–ನಿರೀಕ್ಷಕನಾಗಿ ಕೆಲಸ ಮಾಡಿರುತ್ತೇನೆ.

ದಿನಾಂಕ 16-09-2009 ರಂದು ನಮ್ಮ ಠಾಣೆಯ ಅಂದಿನ ಆರಕ್ಷಕ ಪೇದೆಯಾದ ಭಾಗಣ್ಣ ಎನ್ನುವವರು ಮಾನ್ಯ ನ್ಯಾಯಾಲಯವು ಖಾಸಗಿ ಪ್ರಕರಣ ಸಂಖ್ಯೆ 06/2009 ರಲ್ಲಿನ ಆದೇಶದ ಮೇರೆಗೆ ಹಾಜರು ಮಾಡಿದ ಖಾಸಗಿ ಫಿರ್ಯಾದು ಪಡೆದು ನಮ್ಮ ಠಾಣಾ ಗುನ್ನೆ ಸಂಖ್ಯೆ 172/2009 ರ ಪ್ರಕಾರ ಪ್ರಕರಣವನ್ನ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನ ತಯಾರಿಸಿ ಅವುಗಳನ್ನ ಮಾನ್ಯ ನ್ಯಾಯಾಧೀಶರಿಗೆ ಕಳುಹಿಸಿರುತ್ತೇನೆ. ಮೂಲ ಫಿರ್ಯಾದನ್ನ ಈಗಾಗಲೇ ನಿಪಿ-41 ಎಂದು ಗುರುತಿಲಾಗಿದ್ದು, ನ್ಯಾಯಾಲಯ ತನಿಖಾಧಿಕಾರಿಗೆ ಕಳುಹಿಸಿದ್ದ ನಕಲು ಪ್ರತಿಯ ಮೇಲೆ ಪ್ರಕರಣ ದಾಖಲಿಸಿರುವ ಷರ ಇರುವುದರಿಂದ ಸದರಿ ಪ್ರತಿಯನ್ನ ನಿಪಿ-63 ಮತ್ತು ಅದರ ಮೇಲಿನ ಸಾಕ್ಷಿ ಸಹಿಯನ್ನ ನಿಪಿ-63(ಎ) ಮತ್ತು ಪ್ರಥಮ ವರ್ತಮಾನ ವರದಿಯನ್ನ ನಿಪಿ-64 ಮತ್ತು ಆದರ ಮೇಲಿನ ಸಾಕ್ಷಿ ಸಹಿಯನ್ನ ನಿಪಿ-64(ಎ) ಎಂದು ಗುರುತಿಸಲಾಯಿತು.

ಅದೇ ದಿನ ಚಾಸಾ–1 ತೋರಿಸಿದ ಮೆರೇಗೆ ಚಾಸಾ–2 ಮತ್ತು 3 ರವರ ಸಮಕ್ಷಮ ನಿಪಿ–1 ರ ಪ್ರಕಾರ ಸ್ಥಳ ಪಂಚನಾಮೆಯನ್ನ ಜರುಗಿಸಿರುತ್ತೇನೆ. ನಿಪಿ–1 ರ ಮೇಲಿನ ಸಾಕ್ಷಿ ಸಹಿಯನ್ನ ನಿಪಿ–1(ಸಿ) ಎಂದು ಗುರುತಿಸಲಾಯಿತು.

ಬೇರೆ ಬೇರೆ ದಿನಾಂಕಗಳಂದು ಸಾಕ್ಷಿದಾರರಾದ ಚಾಸಾ–9 ರಿಂದ 21 ರವರ ಸಾಕ್ಷಿ ಹೇಳಿಕೆಗಳನ್ನ

ಪಡೆದಿರುತ್ತೇನೆ.

ನನಗೆ ವರ್ಗಾವಣೆ ಆದ್ದರಿಂದ ಪ್ರಕರಣದ ಕಡತವನ್ನ ಮುಂದಿನ ತನಿಖೆಗಾಗಿ ಚಾಸಾ-29 ರವರಿಗೆ ದಿನಾಂಕ 28-10-2009 ರಂದು ಹಸ್ತಾಂತರಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ** ವಕೀಲರಾದ ಶ್ರೀ ಬಿ. ಕೆ. ಗುಳಗಿಯವರಿಂದ.

ನಾನು ಚಾಸಾ-9 ರಿಂದ 21 ರವರ ಸಾಕ್ಷಿ ಹೇಳಿಕೆಗಳನ್ನ ಪಡೆದಿಲ್ಲ ಎಂದರೆ ಸರಿಯಲ್ಲ. ನಿಪಿ-1 ರ ಪ್ರಕಾರ ಪಂಚನಾಮೆ ಮಾಡುವ ಸಂದರ್ಭದಲ್ಲಿ ಚಾಸಾ-1 ರವರ ಹೇಳಿಕೆಯನ್ನ ಪಡೆದಿರುವುದಿಲ್ಲ. ಚಾಸಾ-1 ರವರು ಹಾಜರಿದ್ದ ಬಗ್ಗೆ ಯಾವುದೇ ದಾಖಲೆಗಳನ್ನ ಪಡೆದಿರುವುದಿಲ್ಲ. ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಠಾಣೆಯಲ್ಲಿ ಕುಳಿತು ನಿಪಿ-1 ನ್ನ ತಯಾರಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೆ.ಸರಿ.ಇದೆ.**

**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು,**
**ಜೇವರ್ಗಿ**

**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ. ಎಮ್. ಎಫ್. ಸಿ. ನ್ಯಾಯಾಲಯ, ಜೇವರ್ಗಿ.**

**ಸಿಸಿ ನಂ.117/2018**

**ಚಾಸಾ-30/ಪಿಡಬ್ಲೂ-26**

| | |
|---|---|
| **ಹೆಸರು** | ರಾಣಪ್ಪ |
| **ತಂದೆ ಹೆಸರು** | ರಾಮಚಂದ್ರ ಕಾಂಬಳೆ |
| **ವಯಸ್ಸು** | 66 ವರ್ಷಗಳು. |
| **ಉದ್ಯೋಗ** | ನಿವೃತ್ತ ಸಹಾಯಕ ಉಪ-ನಿರೀಕ್ಷಕರು, ಜೇವರ್ಗಿ ಪೊಲೀಸ ಠಾಣೆ |
| **ವಾಸ ಸ್ಥಳ** | ಕಲಬುರ್ಗಿ. |

**ಸಾಕ್ಷಿಯನ್ನ ದಿನಾಂಕ 16-11-2019 ರಂದು ಸಾಕ್ಷಿಯನ್ನ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭೀಯೋಜಕರಿಂದ.**

ನಾನು 03-02-2009 ರಿಂದ 31-03-2014 ರವರೆಗೆ ಜೇವರ್ಗಿ ಪೊಲೀಸ ಠಾಣೆಯಲ್ಲಿ ಸಹಾಯಕ ಉಪ-ನಿರೀಕ್ಷಕನಾಗಿ ಕೆಲಸ ಮಾಡಿರುತ್ತೇನೆ.

ದಿನಾಂಕ 02-06-2012 ಪ್ರಕರಣದ ಕಡತವನ್ನ ಚಾಸಾ-29 ರವರಿಂದ ಪಡೆದು ಪರಿಶೀಲಿಸಿ ಮುಂದಿನ ತನಿಖೆಯನ್ನ ಕೈಗೊಂಡಿರುತ್ತೇನೆ.

ದಿನಾಂಕ 04-06-2012 ರಂದು ಬೆಂಗಳೂರಿನ ವಿಧಿವಿಜ್ಞಾನ ಕೇಂದ್ರದಿಂದ ಬೆರಳು ಮುದ್ರೆ ವರದಿ ತಯಾರಾಗಿದೆ ಎಂದು ಇಮೇಲ್ ಬಂದಿದ್ದರಿಂದ ಅದನ್ನ ತರುವಂತೆ ನಮ್ಮ ಠಾಣೆಯ ಮುಖ್ಯ ಪೇದೆ ಸಂಖ್ಯೆ 17 ರವರನ್ನು ಪತ್ರ ಮುಖಾಂತರ ಕಳುಹಿಸಿರುತ್ತೇನೆ

ದಿನಾಂಕ 17-07-2012 ರಂದು ನಮ್ಮ ಠಾಣಾ ಸಿಬ್ಬಂದಿ ನಿಪಿ-50 ಜ್ಞಾಪನದ ಮುಖಾಂತರ ನಿಪಿ-60 ವರದಿಯನ್ನ 61 ಮತ್ತು 62 ನ್ನ ಸ್ವಿಕರಿಸಿರುತ್ತೇನೆ. ನಿಪಿ-50 ರ ಮೇಲಿನ ಸಾಕ್ಷಿ ಸಹಿಯನ್ನ ನಿಪಿ-50(ಎ) ಎಂದು ಗುರುತಿಸಲಾಯಿತು.

ದಿನಾಂಕ 15-11-2012 ರಂದು ಬೆರಳು ಮುದ್ರೆ ಘಟಕದಿಂದ ಬೆರಳು ಮುದ್ರೆ ವರದಿಯನ್ನ ನಿಪಿ-25 ಮತ್ತು 26 ರ ಪ್ರಕಾರ ಸ್ವಿಕರಿಸಿರುತ್ತೇನೆ. ನಿಪಿ-25 ರ ಮೇಲಿನ ಸಾಕ್ಷಿ ಸಹಿಯನ್ನ ನಿಪಿ-25(ಡಿ) ಎಂದು ಗುರುತಿಸಲಾಯಿತು.

ನಮ್ಮ ಠಾಣೆಗೆ ಹೊಸದಾಗಿ ಚಾಸಾ-31 ಬಂದಿದ್ದರಿಂದ ಪ್ರಕರಣದ ಕಡತವನ್ನ ಮುಂದಿನ ತನಿಖೆಗಾಗಿ ಅವರಿಗೆ ದಿನಾಂಕ 15-11-2012 ರಂದು ಹಸ್ತಾಂತರಿಸಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ</u>** <u>ವಕೀಲರಾದ ಶ್ರೀ ಬಿ. ಕೆ. ಗುಳಗಿಯವರಿಂದ.</u>

ನಿಪಿ–60 ರಿಂದ 62 ನ್ನ ಸ್ವೀಕರಿಸಿದ ಬಗ್ಗೆ ಅವುಗಳ ಮೇಲೆ ನಾನು ಸಹಿ ಮಾಡಿರುವುದಿಲ್ಲ ಎಂದರೆ ಸರಿ. ನಿಪಿ–26 ನ್ನ ಸ್ವೀಕರಿಸಿದ ಬಗ್ಗೆ ಅದರ ಮೇಲೆ ನಾನು ಸಹಿ ಮಾಡಿರುವುದಿಲ್ಲ ಎಂದರೆ ಸರಿ. ನಿಪಿ–25 ನ್ನ ಬಿಟ್ಟು ಬೇರೆ ದಾಖಲೆಗಳನ್ನ ನಾನು ಸ್ವೀಕರಿಸಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u> ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೆ.ಸರಿ.ಇದೆ.**

**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು,**
**ಜೇವರ್ಗಿ**